ಕುಂಚ ಪ್ರಪಂಚ

# ಚಂದ್ರಯಾನ 3

**ಅರುಣಾ ನರೇಂದ್ರ**

ಕಲೆ: ಸಂತೋಷ್ ಸಸಿಹಿತ್ಲು

ನಮ್ಮಯ ಭಾರತ ದೇಶದ ನೌಕೆ
ಹಾರಿತು ಚಂದ್ರನ ದಕ್ಷಿಣ ದ್ರುವಕೆ

ಕನಸು ನನಸಾದ ಶುಭದಿನ ನಮ್ಮದು
ವಿಜ್ಞಾನಿಗಳೆಲ್ಲರ ಸಾಧನೆ ಹಿರಿದು

ಉಡಾವಣೆ ವೀಕ್ಷಿಸಿ ಮೈಮನ ಪುಳಕ
ಅಬ್ಬಾ! ನಾ ಬೆರಗಾದೆ ಎಂಥ ಕೈಚಳಕ

ವಿಜ್ಞಾನಿಗಳ ನಡೆ ಚಂದ್ರನ ಸುತ್ತ
ವಿಶ್ವವೇ ನೋಡಿದೆ ನಮ್ಮ ಭಾರತದತ್ತ

ಅಡೆತಡೆಯಿಲ್ಲದೆ ಅಂಗಳ ಸೇರಲಿ
ಮಾಮನ ಊರಿನ ಕುಶಲವ ತರಲಿ

ಇಸ್ರೋ ವಿಜ್ಞಾನಿಗಳಿಗೆ ನಮ್ಮಯ ಸಲಾಂ
ಮಾಡೋಣ ನಾವು ಒಂದಿನ ಅಲ್ಲಿ ಮುಕ್ಕಾಂ







**ಅನ್ವಿತ್ ಪೈ**
ಕ್ಲಾರೆನ್ಸ್ ಪಬ್ಲಿಕ್ ಸ್ಕೂಲ್,
ಬೆಂಗಳೂರು



**ಶ್ರಾವ್ಯಾ ಎಂ.ಪಿ.**
5ನೇ ತರಗತಿ, ಎಂಜಿ ಸ್ಕೂಲ್
ಫಾರ್ ಎಕ್ಸಲೆನ್ಸ್, ಬೆಂಗಳೂರು

